# ಅಪೂರ್ವಮತಿ

■ ಕಂನಾಡಿಗಾ ನಾರಾಯಣ



‘ಹೆಚ್ಚೆಂದರೆ ಇನ್ನು ಮೂರು ತಿಂಗಳು ಬದುಕಿರುತ್ತಾರೆ. ಅವರ ಇಷ್ಟಾರ್ಥ ಕೇಳಿ ಚೆನ್ನಾಗಿ ನೋಡಿಕೊಳ್ಳಿ…’ ಎಂದು ಡಾಕ್ಟರು ಹೇಳಿದಾಗ ನಮ್ಮ ಜಂಘಾಬಲವೇ ಉಡುಗಿಹೋಯಿತು. ಈಗಾಗಲೇ ವರುಷದಿಂದ ಆಸ್ಪತ್ರೆಗೆ ಅಲೆದೂ ಅಲೆದು, ಎರಡೆರಡು ಸೆಕೆಂಡ್ ಒಪೀನಿಯನ್‌ಗಳನ್ನ ಪಡೆದು ಮತ್ತೊಬ್ಬರ ಬಳಿ ತೋರಿಸೀ ತೋರಿಸಿ ನಾವೂ ಬೇಸತ್ತು ಹೋಗಿದ್ದೆವು. ಇನ್ನು ಅವರನ್ನು ಬದುಕಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಮನಸ್ಥಿತಿಗೆ ಎಲ್ಲರೂ ಬಂದಿದ್ದರೂ ಅವರಿಗೆ ಹಾಗಂತ ಹೇಳುವಂತಿರಲಿಲ್ಲ. ಅಪ್ಪನೂ ಡಾಕ್ಟರಾದುದರಿಂದ ಸ್ವತಃ ಅವರಿಗೇ ಇವೆಲ್ಲಾ ಗೊತ್ತಿದ್ದರೂ ನಾವು ಹೆದರಿಕೊಳ್ಳುತ್ತೇವೆ ಎಂದು ಅವರೂ ಬಾಯಿಬಿಟ್ಟು ಹೇಳುತ್ತಿರಲಿಲ್ಲ. ಅವರ ಸಾವು ಹತ್ತಿರದಲ್ಲೇ ಇದೆ ಎಂದು ಅವರಿಗೂ ಗೊತ್ತು, ನಮಗೂ ಗೊತ್ತು. ಆದರೆ ಹಾಗಂತ ಯಾರೊಬ್ಬರೂ ಪರಸ್ಪರ ಹೇಳಿಕೊಳ್ಳದೇ, ಇನ್ನೂ ನೂರು ವರ್ಷ ಬದುಕಿರುತ್ತಾರೆ ಎಂಬಂತೆ ನಾವೂ, ಇನ್ನು ಐವತ್ತಾದರೂ ಬದುಕಿರುತ್ತೇನೆ ಎಂಬಂತೆ ಅವರೂ ಬಿಂಬಿಸಿಕೊಳ್ಳುತ್ತಿದ್ದೆವು. ನಾವು ಸುಳ್ಳು ಹೇಳುತ್ತಿದ್ದೇವೆಂದು ಅವರಿಗೂ, ಅವರು ಸುಳ್ಳು ಹೇಳುತ್ತಿದ್ದಾರೆಂದು ನಮಗೂ ಗೊತ್ತಾಗದಿದ್ದಿರಲಿಲ್ಲ…

ಅಷ್ಟಕ್ಕೂ ಅಪ್ಪನ ಮನೆತನದಲ್ಲಿ ಯಾವುದಕ್ಕೆ ಕೊರತೆಯಿದ್ದರೂ ಕ್ಯಾನ್ಸರ್‌ಗೇನೂ ಕೊರತೆಯಿರಲಿಲ್ಲ. ಅವರ ತಾತ ಬ್ಲಡ್ ಕ್ಯಾನ್ಸರ್‌ಗೆ ಬಲಿಯಾಗಿದ್ದರೆ, ಅವರ ತಂದೆ ಬೋನ್ ಕ್ಯಾನ್ಸರಿಗೆ ಬಲಿಯಾಗಿದ್ದರು. ಆದರೆ ಅವರಾಗಾಗಲೇ ಎಪ್ಪತ್ತನ್ನು ದಾಟಿ ಬದುಕಿನ ಬಂಡಿಯನ್ನು ಎಳೆದುಬಿಟ್ಟಿದ್ದರಿಂದ ಆ ಸಾವುಗಳು ಅಷ್ಟೇನೂ ಆಘಾತಕಾರಿಯಾಗಿರದೆ ಸಾವಿಗೆ ಒಂದು ಕಾರಣವಷ್ಟೇ ಎಂದು ಪರಿಭಾವಿಸಿದ್ದರು. ಆದರೆ ಇನ್ನೂ ನಲವತ್ತನ್ನೂ ದಾಟದ ಅಪ್ಪ ಡಾ. ಸಂತೋಷ್‌ಗೂ ಲಿವರ್ ಕ್ಯಾನ್ಸರ್ ಎಂದಾಗ ಯಾರಿಗೂ ನಂಬಲಾಗಿರಲಿಲ್ಲ. ಸ್ವತಃ ಅವರೇ ನಂಬಿರಲಿಲ್ಲ. ಮೊದಮೊದಲು ವಾಂತಿಯ ಲಕ್ಷಣಗಳು ಕಂಡಾಗ ಸ್ಟೋನ್ ಸಮಸ್ಯೆಯಿರಬಹುದೆಂದು ಭಾವಿಸಿದ್ದರೂ ಸೆಲ್ಫ್ ಮೆಡಿಕೇಷನ್ ಒಳ್ಳೆಯದಲ್ಲವೆಂದು ತನ್ನ ಸಹಪಾಠಿಯೇ ಆಗಿದ್ದ ಬೇರೊಬ್ಬ ಡಾಕ್ಟರನಲ್ಲಿ ತೋರಿಸಿಕೊಂಡಿದ್ದರು. ಅವರು ಆ ಟೆಸ್ಟ್, ಈ ಟೆಸ್ಟ್ ಎಂದು ಬರೆದುಕೊಟ್ಟಾಗ, ಮೆಡಿಕಲ್ ಮಾಫಿಯಾದ ಬಗ್ಗೆ ಅರಿವಿದ್ದ ಅಪ್ಪ, ‘ಏನಯ್ಯ ಇವೆಲ್ಲ, ನನ್ನ ಮೇಲೂ ಪ್ರಯೋಗ ಮಾಡ್ತಿದ್ದೀಯಾ?’ ಎಂದು ಅಸಹನೆ ವ್ಯಕ್ತಪಡಿಸಿದ್ದರು. ‘ಹಾಗಲ್ಲ ಸಂತೋಷ್, ನಿನಗೆ ಏನಾಗಿದೆ ಅಂತ ನನಗಾದರೂ ಗೊತ್ತಾಗದಿದ್ದರೆ ಹೇಗೆ?’ ಎಂದು ಸಮಾಧಾನ ಮಾಡಿದ್ದರು.

‘ನಾವೇ ಡಾಕ್ಟರಾದರೂ ನಮ್ಮ ಸಮಸ್ಯೆಗಳು ನಮಗೆ ಅರ್ಥವಾಗುವುದಿಲ್ಲ, ಇಲ್ಲದಿದ್ದರೆ ಡಾಕ್ಟರರುಗಳಾದರೂ ಸಾಯಬೇಕಿತ್ತು ಏಕೆ?’ ಎಂದು ಅದೇ ಧಾಟಿಯಲ್ಲಿ ಅಪ್ಪ ನಮ್ಮನ್ನೂ ಸಮಾಧಾನಪಡಿಸಿದ್ದರು.

***

ಈ ಟ್ರೀಟ್‌ಮೆಂಟ್ ನಡುವೆಯೇ ಅಪ್ಪ, ತನ್ನ ತಂದೆಯ ಜವಾಬ್ದಾರಿಯನ್ನೂ ಪೂರೈಸಬೇಕಾಗಿತ್ತು. ಅದು ಅವರ ತಂಗಿ ಅರ್ಪಿತಾಳ ಮದುವೆ. ಚೌಲ್ಟ್ರಿಯಲ್ಲಿ ರಾತ್ರಿ ರಿಸೆಪ್ಷನ್ ಮುಗಿಸಿ ನೆಂಟರೆಲ್ಲ ಹೋದ ಮೇಲೆ ಊಟ ಮಾಡಿದವರಿಗೆ ಸ್ವಲ್ಪೇ ಸ್ವಲ್ಪ ಹೊತ್ತಿನಲ್ಲಿ ಜ್ವರ ಕಾಣಿಸಿಕೊಂಡಿತು. ಜೊತೆಗೆ ವಾಂತಿ ಮತ್ತು ಭೇದಿ ಸಹ…

ಜ್ವರ ಅಂದರೆ ಅಂತಿಂಥ ಜ್ವರವಲ್ಲ. ಎಷ್ಟು ಅನ್‌ಕಂಟ್ರೋಲಬಲ್ ಎಂದರೆ, ಕೆಂಡದಂತೆ ಮೈ ಸುಡುತ್ತಿದ್ದರೂ ಅಪ್ಪ ಚಳಿಗೆ ಗಡಗಡ ಅಂತ ನಡುಗುತ್ತಿದ್ದರು. ಅಮ್ಮನಂತೂ ಕುಸಿದುಬಿದ್ದಳು. ನಾನೂ, ತಂಗಿ ಅಮೂಲ್ಯ ಅಪ್ಪನಿಗೆ ಹೆಗಲುಕೊಟ್ಟು ಕಾರಿನವರೆಗೆ ಕರೆದುತಂದು, ಆಸ್ಪತ್ರೆಗೆ ಸೇರಿಸಿ, ರಾತ್ರಿ ಹನ್ನೆರಡೂಮುಕ್ಕಾಲಲ್ಲಿ ಬೆಂಗಳೂರಿನ ಅವರ ರೆಗ್ಯುಲರ್ ಡಾಕ್ಟರರಿಗೆ ಫೋನ್ ಮಾಡಿಕೊಟ್ಟು ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಬೆಳಗ್ಗೆ ಎದ್ದರೆ ಮುಹೂರ್ತ. ಅಪ್ಪ ಅಮ್ಮ ಇಬ್ಬರೂ ಇರಲೇಬೇಕು. ಏನು ಮಾಡುವುದು? ಆವರೆಗೂ ಅಪ್ಪನನ್ನು ಬೆಂಗಳೂರಿಗೆ ಕರೆದೊಯ್ಯಲಾಗೋಲ್ಲ ಎಂದದ್ದಕ್ಕೆ ಡ್ರಿಪ್ಸ್ ಹಾಕಿ ಏನೇನೋ ಟ್ರೀಟ್‌ಮೆಂಟ್ ನೀಡಿದರು. ಸ್ವಲ್ಪ ಸುಧಾರಿಸಿಕೊಂಡು ಬೆಳಗ್ಗೆ ವ್ಹೀಲ್‌ಚೇರಲ್ಲಿ ಬಂದು ಮುಹೂರ್ತ ಮಾಡಿದರೂ, ಇವರಿಗೇನೋ ಆಗಬಾರದ್ದು ಆಗಿದೆ ಎಂಬುದನ್ನು ಇಡೀ ಊರಿಗೆ ಜಾಹೀರಾತು ಮಾಡಿಕೊಂಡಂತಾಯಿತು.

ಬೆಂಗಳೂರಿಗೆ ಬಂದವರೇ ಸೀದಾ ಅಡ್ಮಿಟ್ ಮಾಡಿದ್ದಷ್ಟೇ ನಾವು ಮಾಡಿದ ಮೊದಲ ಕೆಲಸ. ಅಮ್ಮ, ನಾದಿನಿಯ ಮೇಲೆ ಆ ಕ್ಷಣದ ತನ್ನ ಸ್ತ್ರೀಸಹಜ ಸಿಟ್ಟನ್ನು ಕಾರಿದರೂ, ಸದ್ಯ ಅವಳು ಹೇಗೋ ಅವಳ ಗಂಡನ ಮನೆ ಸೇರಿಕೊಂಡಳಲ್ಲ, ಸದ್ಯ ಪೀಡೆ ತೊಲಗಿತು ಎಂಬ ಭಾವ ಬಂದಿರಲಿಕ್ಕೂ ಸಾಕು. ಅಪ್ಪನ ಟೆಸ್ಟ್ ರಿಪೋರ್ಟ್ ಅನ್ನು ಕೈಗೆ ಕೊಟ್ಟು, ‘ಲೇ ಅಪೂರ್ವ, ನೀನು ಪಿಯುಸಿ ಸೈನ್ಸ್ ತಾನೇ, ಅದೇನು ಕಾಯಿಲೆ ಅಂತ ಡಯೊಗ್ನೈಸ್ ಮಾಡಿದ್ದಾರೋ, ನೋಡಿ ಹೇಳೇ…’ ಎಂದರು ಅಮ್ಮ. ಅಂತೂ ಲಿವರ್ ಸಿರೋಸಿಸ್ ಎಂಬ ಪದವನ್ನು ಕಂಡುಹಿಡಿದು, ಅದು ಲಿವರ್‌ಗೆ ಸಂಬಂಧಿಸಿದ ಕಾಯಿಲೆ ಎಂಬುದನ್ನು ಮನವರಿಕೆ ಮಾಡಿಕೊಟ್ಟೆ.